ಕನ್ನಡಪ್ರಭ

**Wednesday 17th April 2024**

# Mr. Santosh & Mr. Tejas RVCE Student cleared UPSC Exam 2024

## ಯುಪಿಎಸ್ಸಿ ಪರೀಕ್ಷೆ

# ಕರ್ನಾಟಕದ 25 ಮಂದಿಗೆ ರ್‍ಯಾಂಕ್

### ವಿಜಯಪುರದ ವಿಜೇತ ರಾಜ್ಯಕ್ಕೇ ಟಾಪ್ ದಾವಣಗೆರೆಯ ಸೌಭಾಗ್ಯಗೆ 2ನೇ ಸ್ಥಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಲೋಕಸೇವಾ ಆಯೋಗದ 2023ನೇ ಸಾಲಿನ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯದ ಅಭ್ಯರ್ಥಿಗಳಾದ ಆರ್. ರಮ್ಯಾ, ವಿಜಯಪುರದ ವಿಜೇತಾ ಹೊಸಮನಿ, ದಾವಣಗೆರೆ ಮೂಲದ ಸೌಭಾಗ್ಯ ಬೀಳಗಿಮಠ, ಬೆಂಗಳೂರಿನ ಠಾಣೆಯೊಂದರ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶಾಂತಪ್ಪ ಕುರುಬರ್ ಸೇರಿದಂತೆ ರಾಜ್ಯದ ಸುಮಾರು 25ಕ್ಕೂ ಹೆಚ್ಚು ಮಂದಿ ಉತ್ತಮ ರ್‍ಯಾಂಕ್‌ನೊಂದಿಗೆ ಭಾರತೀಯ ನಾಗರಿಕ ಸೇವೆಯ ವಿವಿಧ ಹುದ್ದೆಗಳಿಗೆ ಆಯ್ಕೆಯಾಗಲು ಅರ್ಹತೆ ಪಡೆದಿದ್ದಾರೆ.

ವಿಜಯಪುರದ ವಿಜೇತಾ ಹೊಸಮನಿ ಅವರು ಅಖಿಲ ಭಾರತ ಮಟ್ಟದಲ್ಲಿ 100ನೇ ರ್‍ಯಾಂಕ್ ಪಡೆದಿದ್ದು, ಅವರೇ ಟಾಪರ್ ಎಂದು ಹೇಳಲಾಗುತ್ತಿದೆ, ದಾವಣಗೆರೆಯ ಸೌಭಾಗ್ಯ ಬೀಳಗಿಮಠ 101ನೇ ರ್‍ಯಾಂಕ್ ಪಡೆದಿದ್ದು ಎರಡನೇ ಟಾಪರ್ ಆಗಿದ್ದಾರೆ ಎನ್ನಲಾಗಿದೆ.

**ಕೋಚಿಂಗ್ ಹೋಗದೇ ಸ್ವಂತ ಯತ್ನ:** ಧಾರವಾಡ ಕೃಷಿ ವಿಶ್ವವಿದ್ಯಾಲಯದ ಪದವೀಧರೆಯಾದ ಸೌಭಾಗ್ಯ ಅವರು ಯಾವುದೇ ಕೋಚಿಂಗ್‌ಗೆ ಹೋಗದೆ ಮನೆಯಲ್ಲಿ ಸ್ವಂತ ತರಬೇತಿಯೊಂದಿಗೆ ಎರಡನೇ ಪ್ರಯತ್ನದಲ್ಲೇ ಉತ್ತಮ ಸಾಧನೆ ಮಾಡಿದ್ದಾರೆ.

ಶಾಂತಪ್ಪ ಕುರುಬರ ತಮ್ಮ 8ನೇ ಪ್ರಯತ್ನದಲ್ಲಿ 644ನೇ ರ್‍ಯಾಂಕ್ ಪಡೆದಿದ್ದಾರೆ. ಹುಬ್ಬಳ್ಳಿಯ ಕೃಪಾ ಜೈನ್ 440ನೇ ರ್‍ಯಾಂಕ್, ದೃಷ್ಟಿದೋಷವಿರುವ ಕೆ.ಟಿ.ಮೇಘನಾ 721ನೇ ರ್‍ಯಾಂಕ್ ಪಡೆದಿದ್ದಾರೆ. ಇವರು ಈಗಾಗಲೇ ಇಂಡಿಯನ್ ಇನ್ಫರ್ಮೇಷನ್ ಆಫೀಸರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮೀಣಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿ ಪ್ರಮೀಳಾ ಅವರ ಮಗಳು ಆರ್.ಯಶಸ್ವಿನಿ 379ನೇ ರ್‍ಯಾಂಕ್ ಪಡೆದಿದ್ದಾರೆ.

8



ವಿಜೇತ



ಸೌಭಾಗ್ಯ

### ಲಖನೌದ ಆದಿತ್ಯ ದೇಶಕ್ಕೇ ಪ್ರಥಮ



**ನವದೆಹಲಿ:** ಐಎಎಸ್, ಐಪಿಎಸ್, ಐಎಫ್‌ಎಸ್‌ನಂಥ ನಾಗರಿಕ ಸೇವಾ ಸೇವೆಗಳ ಹುದ್ದೆಗೆ ಭರ್ತಿಗೆ ನಡೆಸಲಾಗುವ 2023ನೇ ಸಾಲಿನ ಕೇಂದ್ರೀಯ ಲೋಕ ಸೇವಾ ಆಯೋಗದ ಪರೀಕ್ಷೆಯಲ್ಲಿ ಉತ್ತರಪ್ರದೇಶ ರಾಜಧಾನಿ ಲಖನೌದ ಆದಿತ್ಯ ಶ್ರೀವಾಸ್ತವ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ.

ವಿವರ 10

### ಕೋಚಿಂಗ್ ಪಡೆಯದೆ 101ನೇ ರ್‍ಯಾಂಕ್ ಪಡೆದ ಟಾಪರ್ ಸೌಭಾಗ್ಯ

### ಲ್ಯಾಬ್ ಟೆಕ್ನಿಷಿಯನ್ ಪುತ್ರನಿಗೆ 481ನೇ ಸ್ಥಾನ

### ಹುಬ್ಬಳ್ಳಿ ವರ್ತಕನ ಪುತ್ರಿಗೆ 440ನೇ ಸ್ಥಾನ

ಪುಟ 8

# ಯುಪಿಎಸ್ಸಿ ಪರೀಕ್ಷೆ: ರಾಜ್ಯದ 25 ಮಂದಿ ಅಭ್ಯರ್ಥಿಗಳಿಗೆ ರ್‍ಯಾಂಕ್

2ನೇ ಪುಟದಿಂದ

**25 ಮಂದಿ ಉನ್ನತ ಹುದ್ದೆಗೆ ಅರ್ಹ:** ಅಂದಾಜಿನ ಪ್ರಕಾರ ಈ ವರ್ಷ 75ಕ್ಕೂ ಹೆಚ್ಚಿನ ರಾಜ್ಯದ ಅಭ್ಯರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಇದರಲ್ಲಿ 25ಕ್ಕೂ ಹೆಚ್ಚು ಮಂದಿ ವಿವಿಧ ನಾಗರಿಕ ಸೇವಾ ಹುದ್ದೆಗಳಿಗೆ ಅರ್ಹತೆ ಪಡೆದಿದ್ದಾರೆ. ಉತ್ತಮ ರ್‍ಯಾಂಕ್ ಪಡೆದಿರುವ ಅಭ್ಯರ್ಥಿಗಳಲ್ಲಿ ಬಹುತೇಕರು ಇನ್‌ಸೈಟ್ಸ್ ಐಎಎಸ್ ಕೋಚಿಂಗ್ ಅಕಾಡೆಮಿ, ಇಂಡಿಯಾ 4 ಐಎಎಸ್, ಡಾ.ರಾಜ್ ಕುಮಾರ್‌ಸಿವಿಲ್ ಸರ್ವೀಸ್ ಅಕಾಡೆಮಿ, ಯೂನಿವರ್ಸಲ್ ಕೋಚಿಂಗ್ ಸೆಂಟರ್‌ಸೇರಿದಂತೆ ಪ್ರಮುಖ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆದವರಾಗಿದ್ದಾರೆ.

**ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಪುತ್ರಿಗೆ 366ನೇ ರ್‍ಯಾಂಕ್:** ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಬಿಬಿಎಂಪಿ ಆಡಳಿತಾಧಿಕಾರಿ ರಾಜೇಶ್ ಸಿಂಗ್ ಅವರ ಪುತ್ರಿ ಸಂಸ್ಕೃತಿ ಸಿಂಗ್ ಅವರು ಅಖಿಲ ಭಾರತ ಮಟ್ಟದಲ್ಲಿ 366ನೇ ರ್‍ಯಾಂಕ್ ಪಡೆದಿದ್ದಾರೆ. ಇವರ ಕುಟುಂಬ ತಲೆಮಾರುಗಳಿಂದಲೂ ಭಾರತೀಯ ನಾಗರಿಕ ಸೇವಾ ಹುದ್ದೆಗಳಲ್ಲೇ ಸಾಗಿ ಬಂದಿದೆ.

**ಉತ್ತಮ ರ್‍ಯಾಂಕ್ ಪಡೆದ ಕರ್ನಾಟಕದ ಅಭ್ಯರ್ಥಿಗಳು:** ಸೌಭಾಗ್ಯ ಎಸ್. ಬಿಳಗಿಮಠ: 101, ನಾಗೇಂದ್ರಬಾಬು ಕುಮಾರ್: 160, ತೇಜಸ್ ಕೆ.: 342, ಯಶ್ವಿನಿ ಆರ್.: 379, ಶಶಾಂತ್ ಎನ್.ಎಂ: 459, ಪೂಲಾ ಧನುಷ್: 480, ಸತೀಶ್ ಶ್ರೀಶೈಲ್ ಸೋಮಜಲ್: 538, ಮೇಘನಾ ಐ.ಎನ್: 589, ಭಾನುಪ್ರಕಾಶ್ ಜೆ.: 600, ಸುಮಾ ಎಚ್. ಕೆ.: 635, ಶಾಂತಪ್ಪ ಕುರುಬರ: 644, ಭರತ್ ಸಿ.ಯಾರಮ್: 667, ತೇಜಸ್.ಎನ್: 668, ಪ್ರಮೋದ್ ಆರಾಧ್ಯ ಎಚ್.ಆರ್: 671, ವೈಶಂಕ್ ಭಾಗೀ: 684, ನವ್ಯ ಕೆ: 692, ಮೇಘನಾ ಕೆ.ಟಿ.: 721, ಚಂದನಾ ಬಿ.ಎಸ್: 731, ವಿವೇಕ್ ರೆಡ್ಡಿ .ಎನ್: 741, ಸತೀಶ್ ದೀಪ್: 748, ಲೇಖನಾ ಎಂ.: 777, ತೇಜಸ್ವಿನಿ.ಎನ್: 787, ರಕ್ಷಿತ್ ಕೆ.ಗೌಡ: 802, ಹಂಸಾಶ್ರೀ ಎನ್.ಎ: 866, ಸುಪ್ರೀತ್ ಸಂತೋಷ್: 868, ಅಭಿಷೇಕ್ ಕೆ.ಎಚ್.: 901, ವಸಂತ ಕುಮಾರ್.ಜಿ: 902, ಟಿ. ವಿಜಯಕುಮಾರ್: 953, ತನುಜ್ ಕುಮಾರ್. ಕೆ: 973.